KACM210018842024

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಕಡೂರು
ಉಪಸ್ಥಿತರು :
ಶ್ರೀಮತಿ ನಳಿನ ಎಸ್.ಸಿ., ಬಿ.ಎ ಎಲ್.ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕಡೂರು

<u>ದಿನಾಂಕ:**03** ನೇ ಆಗಸ್ಟ್ **2026**</u>

<u>ಅಪರಾಧಿಕ ಪ್ರಕರಣ ಸಂಖ್ಯೆ: **1203/2024**</u>

ಫಿರ್ಯಾದಿದಾರರು - ಕರ್ನಾಟಕ ರಾಜ್ಯದ ಪರವಾಗಿ
ಕಡೂರು ಪೊಲೀಸ್ ಠಾಣೆ.

(ಸರ್ಕಾರದ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

- ವಿರುದ್ಧ -

ಆರೋಪಿ - ಶ್ರೀ ನಂದೀಶ ಎ.ಜಿ. ಬಿನ್ ಗಂಗಾಧರಪ್ಪ,
ವಯಸ್ಸು 36 ವರ್ಷ,
ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕ ಮತ್ತು ನಿರ್ವಾಹಕ,
ಬಿಲ್ಲೆ ಸಂಖ್ಯೆ: 1758, ಅರಸೀಕೆರೆ ಡಿಪೋ, ವಾಸ ಃ
ಅಗ್ಗುಂದ ಗ್ರಾಮ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

(ಶ್ರೀ.ಬಿ.ಆರ್.ಹೆಚ್. ವಕೀಲರು)

1. ಘಟನೆ ನಡೆದ ದಿನಾಂಕ ಃ 23.03.2024
2. ಆಪಾದಿಸಲಾದ ಅಪರಾಧದ ಕಾಯ್ದೆಗಳು ಃ ಭಾ.ದಂ.ಸಂ.ಕಲಂ.279,337, 338
3. ಸಾಕ್ಷಿ ವಿಚಾರಣೆ ಪ್ರಾರಂಭಗೊಂಡ ದಿನಾಂಕ ಃ 20.01.2026
4. ಸಾಕ್ಷಿ ವಿಚಾರಣೆ ಮುಕ್ತಾಯಗೊಂಡ ದಿನಾಂಕ ಃ 30.06.2026

6. ನ್ಯಾಯಾಧೀಶರ ತೀರ್ಮಾನ ನಿರ್ದೋಷಿಯೆಂದು ಪರಿಗಣಿಸಿದೆ
7. ತೀರ್ಮಾನವಾದ ದಿನಾಂಕ 03.08.2026

NALINA S C Digitally signed by NALINA S C Date: 2026.08.04 12:30:18 +0530

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕಡೂರು.

<u>ತೀರ್ಪು</u>

ಕಡೂರು ಪೊಲೀಸ್ ಠಾಣೆ, ಠಾಣಾಧಿಕಾರಿರವರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ.279, 337, 338 ರಡಿಯಲ್ಲಿನ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-

ದಿನಾಂಕ 23.03.2024 ರಂದು ಬೆಳಗಿನ ಜಾವ ಸುಮಾರು 3.45 ಗಂಟೆ ಸಮಯದಲ್ಲಿ ಕಡೂರು ಪೋಲೀಸ್ ಠಾಣಾ ಸರಹದ್ದಿನ ಅಂಚೆಚೋಮನಹಳ್ಳಿ ಗ್ರಾಮದಿಂದ ಮುಂದೆ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮುಂದೆ ಹಾದು ಹೋಗಿರುವ ಎನ್.ಹೆಚ್.206 ಟಾರು ರಸ್ತೆಯಲ್ಲಿ ಆರೋಪಿಯು ಕೆಎ-18-ಎಫ್ 832 ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಅತಿವೇಗ, ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಕಡೂರು ಕಡೆಯಿಂದ ಬಾಣಾವಾರ ಕಡೆಗೆ ಚಾಲನೆ ಮಾಡಿಕೊಂಡು ಬರುತ್ತಿರುವಾಗ, ರಸ್ತೆಗೆ ಅಡ್ಡಲಾಗಿ ಯಾವುದೋ ಕಾಡು

ಪ್ರಾಣಿ ಅಡ್ಡ ಬಂದಿದ್ದರಿಂದ, ಕಾಡು ಪ್ರಾಣಿಯನ್ನು ತಪ್ಪಿಸಲು ಬಸ್ಸನ್ನು ನಿಯಂತ್ರಿಸಲು ಹೋದಾಗ, ಬಸ್ಸು ಆರೋಪಿಯ ನಿಯಂತ್ರಣಕ್ಕೆ ಸಿಗದೇ ರಸ್ತೆಯ ಪಕ್ಕದ ಡಿವೈಡರ್ ಗೆ ಡಿಕ್ಕಿ ಹೊಡೆದು, ನಂತರ ಕಬ್ಬಿಣದ ವಾಕ್ ಟವರ್ ಗೆ ಹಾಕಿರುವ ಸಿಮೆಂಟ್ ಗೋಡೆಗೆ ಡಿಕ್ಕಿಪಡಿಸಿ ಅಪಘಾತ ಪರಿಣಾಮ, ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-3 ಮಹಂತೇಶ ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳು ಹಾಗೂ ಚಾಸಾ-1 ಶಿವಲಿಂಗಪ್ಪ ಮತ್ತು ಚಾಸಾ-2 ಅಜಯ್ ಕುಮಾರ್ ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆಯ ಕಲಂ 279, 337 ಮತ್ತು 338 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ಆರೋಪಿಯು ತನ್ನ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಈ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ.

**4.** ತನಿಖಾಧಿಕಾರಿಗಳು ತನಿಖಾ ಕಾರ್ಯವನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯ ಭಾರತೀಯ ದಂಡ ಸಂಹಿತೆಯ ಕಲಂ.279, 337, 338 ರಡಿಯಲ್ಲಿನ ಅಪರಾಧಕ್ಕೆ ಸಂಜ್ಞೇಯತೆಯನ್ನು ತೆಗೆದುಕೊಂಡಿರುತ್ತದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿಗೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**5.** ಆರೋಪಿಯ ವಿರುದ್ಧ ಆಪಾದನೆಯನ್ನು ರಚಿಸಿ, ಓದಿ, ಆರೋಪಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಹೇಳಿದ್ದು ಆರೋಪಿಯು ತಾನು ತಪ್ಪನ್ನು ಮಾಡಿರುವುದಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

**6.** ಅಭಿಯೋಜನೆಯು ಆರೋಪಿಗಳ ವಿರುದ್ಧ ಮಾಡಿರುವ ಆರೋಪಗಳನ್ನು ಸಂದೇಹಾತೀತವಾಗಿ ರುಜುವಾತು ಪಡಿಸಲು ತಮ್ಮ ಪರವಾಗಿ ಸಾಕ್ಷಿದಾರರನ್ನು ಫ್ರಾಸಾ-1 ರಿಂದ 7 ಎಂದು ವಿಚಾರಣೆಗೆ ಒಳಪಡಿಸಿ ನಿಪಿ-1 ರಿಂದ 10 ಎಂಬ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಆರೋಪಿ ವಿರುದ್ಧ 313 ಹೇಳಿಕೆಯನ್ನು ದಾಖಲಿಸಲಾಯಿತು. ನಂತರ ಈ ಪ್ರಕರಣವನ್ನು ಮುಂದಿನ ಹಂತವಾದ ವಾದ ಮಂಡನೆಗಾಗಿ ಮುಂದೂಡಲಾಯಿತು.

**7.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಯಿತು.

**8.** ಅಭಿಯೋಜನೆಯು ಆರೋಪಿಯ ವಿರುದ್ಧ ಮಾಡಿರುವ ಆರೋಪಗಳ ರೀತ್ಯ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

> ಅಂಶ ಸಂಖ್ಯೆ.**1**. ದಿನಾಂಕ 23.03.2024 ರಂದು ಬೆಳಗಿನ ಜಾವ ಸುಮಾರು 3.45 ಗಂಟೆ ಸಮಯದಲ್ಲಿ ಕಡೂರು ಪೋಲೀಸ್ ಠಾಣಾ ಸರಹದ್ದಿನ ಅಂಚೆಚೋಮನಹಳ್ಳಿ ಗ್ರಾಮದಿಂದ ಮುಂದೆ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮುಂದೆ ಹಾದು ಹೋಗಿರುವ

ಎನ್.ಹೆಚ್.206 ಟಾರು ರಸ್ತೆಯಲ್ಲಿ ಆರೋಪಿಯು ಕೆಎ-18-ಎಫ್ 832 ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಅತಿವೇಗ, ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಕಡೂರು ಕಡೆಯಿಂದ ಬಾಣಾವಾರ ಕಡೆಗೆ ಚಾಲನೆ ಮಾಡಿಕೊಂಡು ಬರುತ್ತಿರುವಾಗ, ರಸ್ತೆಗೆ ಅಡ್ಡಲಾಗಿ ಯಾವುದೋ ಕಾಡು ಪ್ರಾಣಿ ಅಡ್ಡ ಬಂದಿದ್ದರಿಂದ, ಕಾಡು ಪ್ರಾಣಿಯನ್ನು ತಪ್ಪಿಸಲು ಬಸ್ಸನ್ನು ನಿಯಂತ್ರಿಸಲು ಹೋದಾಗ, ಬಸ್ಸು ಆರೋಪಿಯ ನಿಯಂತ್ರಣಕ್ಕೆ ಸಿಗದೇ ರಸ್ತೆಯ ಪಕ್ಕದ ಡಿವೈಡರ್ ಗೆ ಡಿಕ್ಕಿ ಹೊಡೆದು, ನಂತರ ಕಬ್ಬಿಣದ ವಾಕ್ ಟವರ್ ಗೆ ಹಾಕಿರುವ ಸಿಮೆಂಟ್ ಗೋಡೆಗೆ ಡಿಕ್ಕಿಪಡಿಸಿ, ಆ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

ಅಂಶ ಸಂಖ್ಯೆ.**2**. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯು ಮೇಲ್ಕಂಡಂತೆ ಅಪಘಾತವನ್ನುಂಟು ಮಾಡಿದ್ದರಿಂದ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-3 ಮಹಂತೇಶರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 337 ರ ಅಡಿಯಲ್ಲಿ ಆರೋಪಿ ರವರು ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

ಅಂಶ ಸಂಖ್ಯೆ.**3**. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯು ಮೇಲ್ಕಂಡಂತೆ ಅಪಘಾತವನ್ನುಂಟು ಮಾಡಿದ್ದರಿಂದ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-1 ಶಿವಲಿಂಗಪ್ಪ ಮತ್ತು

ಚಾಸಾ-2 ಅಜಯ್ ಕುಮಾರ್ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 338 ರ ಅಡಿಯಲ್ಲಿ ಆರೋಪಿ ರವರು ಶಿಕ್ಷಾರ್ಹವಾದ ಅಪರಾಧ ಮಾಡಿರು ತ್ತಾರೆಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

ಅಂಶ ಸಂಖ್ಯೆ.**4.** ಯಾವ ಆದೇಶ?

**9.** ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ-1 - ನಕಾರಾತ್ಮಕವಾಗಿ
ಅಂಶ-2 - ನಕಾರಾತ್ಮಕವಾಗಿ
ಅಂಶ-3 - ನಕಾರಾತ್ಮಕವಾಗಿ
ಅಂಶ-4 - ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

:: ಕಾರಣಗಳು ::

**10.** <u>ಅಂಶ-**1** ರಿಂದ **3-**</u> 1 ರಿಂದ 3 ನೇ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಒಂದರ ಅಂಶದ ಮೇಲಿನ ಚರ್ಚೆಯು ಇನ್ನುಳಿದ ಅಂಶಗಳಲ್ಲಿನ ಚರ್ಚೆಯಲ್ಲಿ ಪುನರಾವರ್ತನೆಯಾಗುವ ಕಾರಣಕ್ಕಾಗಿ ಸದರಿ ಎಲ್ಲ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**11.** ದಿನಾಂಕ 23.03.2024 ರಂದು ಬೆಳಗಿನ ಜಾವ ಸುಮಾರು 3.45 ಗಂಟೆ ಸಮಯದಲ್ಲಿ ಕಡೂರು ಪೋಲೀಸ್ ಠಾಣಾ ಸರಹದ್ದಿನ ಅಂಚೆಚೋಮನಹಳ್ಳಿ ಗ್ರಾಮದಿಂದ ಮುಂದೆ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ

ಮುಂದೆ ಹಾದು ಹೋಗಿರುವ ಎನ್.ಹೆಚ್.206 ಟಾರು ರಸ್ತೆಯಲ್ಲಿ ಆರೋಪಿಯು ಕೆಎ-18-ಎಫ್ 832 ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಅತಿವೇಗ, ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಕಡೂರು ಕಡೆಯಿಂದ ಬಾಣಾವಾರ ಕಡೆಗೆ ಚಾಲನೆ ಮಾಡಿಕೊಂಡು ಬರುತ್ತಿರುವಾಗ, ರಸ್ತೆಗೆ ಅಡ್ಡಲಾಗಿ ಯಾವುದೋ ಕಾಡು ಪ್ರಾಣಿ ಅಡ್ಡ ಬಂದಿದ್ದರಿಂದ, ಕಾಡು ಪ್ರಾಣಿಯನ್ನು ತಪ್ಪಿಸಲು ಬಸ್ಸನ್ನು ನಿಯಂತ್ರಿಸಲು ಹೋದಾಗ, ಬಸ್ಸು ಆರೋಪಿಯ ನಿಯಂತ್ರಣಕ್ಕೆ ಸಿಗದೇ ರಸ್ತೆಯ ಪಕ್ಕದ ಡಿವೈಡರ್ ಗೆ ಡಿಕ್ಕಿ ಹೊಡೆದು, ನಂತರ ಕಬ್ಬಿಣದ ವಾಕ್ ಟವರ್ ಗೆ ಹಾಕಿರುವ ಸಿಮೆಂಟ್ ಗೋಡೆಗೆ ಡಿಕ್ಕಿಪಡಿಸಿ ಅಪಘಾತ ಪರಿಣಾಮ, ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-3 ಮಹಂತೇಶ ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳು ಹಾಗೂ ಚಾಸಾ-1 ಶಿವಲಿಂಗಪ್ಪ ಮತ್ತು ಚಾಸಾ-2 ಅಜಯ್ ಕುಮಾರ್ ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ. ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆಯ ಕಲಂ 279, 337 ಮತ್ತು 338 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**12.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತು ಪಡಿಸಲು ಚಾಸಾ-1/ಫ್ರಾಸಾ-1 ಶಿವಲಿಂಗಪ್ಪ, ಪಿರ್ಯಾದುದಾರರನ್ನು ವಿಚಾರಣೆಗೆ ಒಳಪಡಿಸಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಾನು ಅರಸೀಕೆರೆ ಡಿಪೋದಲ್ಲಿ ಕಳೆದ 7 ವರ್ಷದಿಂದ ಕೆಲಸ ಮಾಡುತ್ತಿದ್ದು, ದಿನಾಂಕಃ 22.03.2024 ರಂದು ಕೆ.ಎಸ್.ಆರ್.ಟಿ.ಸ ಬಸ್ಸು

ಸಂಖ್ಯೆ: ಕೆಎ-18 ಎಫ್ 832 ರ ಬಸ್ಸು ಭದ್ರಾವತಿಯ ಕಾರೇಹಳ್ಳಿ ಬಳಿ ಬ್ರೇಕ್ ಡೌನ್ ಆಗಿ ನಿಂತಿದೆ ಎಂದು, ಸದರಿ ಬಸ್ಸಿನ ಚಾಲಕ ಡಿಪೋಗೆ ಫೋನ್ ಮಾಡಿ ತಿಳಿಸಿದ್ದರು ಎಂದು, ಡಿಪೋದವರು ನನಗೆ ಮತ್ತು ಚಾಸಾ-2 ರವರನ್ನು ಬಸ್ಸು ರಿಪೇರಿಗೆ ಕಳುಹಿಸಿಕೊಟ್ಟರು ಎಂದು, ಅದರಂತೆ ನಾವು ಸದರಿ ಸ್ಥಳಕ್ಕೆ ಹೋದಾಗ ರಾತ್ರಿ ಸುಮಾರು 9.00 ಗಂಟೆಯಾಗಿದ್ದು, ಸದರಿ ಬಸ್ಸಿನ ಚಾಲಕರಾಗಿ ಚಾಸಾ-3 ಇದ್ದು, ಹಾಗೂ ಆರೋಪಿಯು ನಿರ್ವಾ ಹಕರಾಗಿದ್ದು, ಚಾಸಾ-3 ಮತ್ತು ಆರೋಪಿಯು ಚಾಲಕ ಕಂ - ನಿರ್ವಾಹಕ ಹುದ್ದೆಯನ್ನು ನಿರ್ವಹಿಸಿರುತ್ತಾರೆ ಎಂದು, ಸದರಿ ಬಸ್ಸು ರಿಪೇರಿ ಮುಗಿಯುವಷ್ಟರಲ್ಲಿ ರಾತ್ರಿ 1.30 ಆಗಿದ್ದು, ಚಾಸಾ-3 ರವರು ಸದರಿ ಬಸ್ಸನ್ನು ಚಾಲನೆ ಮಾಡಿಕೊಂಡು ತರೀಕೆರೆ ಸಮೀಪದ ಎಂ.ಸಿ.ಹಳ್ಳಿವರೆಗೂ ಬಂದಿದ್ದು, ಅಲ್ಲಿ ಬಸ್ಸನ್ನು ಸೈಡಿಗೆ ನಿಲ್ಲಿಸಿ ಸ್ವಲ್ಪ ಸಮಯ ವಿಶ್ರಾಂತಿ ತೆಗೆದುಕೊಂಡು ಹೋಗೋಣಾ ಎಂದು ಬಸ್ಸಿನಲ್ಲಿ ನಾವುಗಳು ಮಲಗಿದ್ದಾಗ, ಸ್ವಲ್ಪ ಸಮಯದ ನಂತರ ನಾವು ಎಚ್ಚರಗೊಂಡಾಗ ಬಸ್ಸು ಚಲಿಸುತ್ತಿತ್ತು, ಆಗ ನಾವು ಚಾಸಾ-3 ರವರೇ ಬಸ್ಸನ್ನು ತೆಗೆದುಕೊಂಡು ಹೋಗುತ್ತಿರಬಹುದು ಎಂದು ಮಲಗಿಕೊಂಡೆವು ಎಂದು, ಆದರೆ ಆರೋಪಿಯು ಸದರಿ ಬಸ್ಸನ್ನು ಚಾಲನೆ ಮಾಡಿಕೊಂಡು ಹೋಗಿ ಅಪಘಾತಪಡಿಸಿರುತ್ತಾರೆ ಎಂದು, ಆದರೆ ಆರೋಪಿಯು ಸದರಿ ಬಸ್ಸನ್ನು ಚಾಲನೆ ಮಾಡಿಕೊಂಡು ಹೋಗಿ ಅಪಘಾತ ಪಡಿಸಿರುತ್ತಾರೆ. ನಾವು ಎದ್ದು ನೋಡಿದಾಗ ಆರೋಪಿ ಬಸ್ಸನ್ನು ಚಾಲನೆ ಮಾಡುತ್ತಿದ್ದರು ಎಂದು, ಅಪಘಾತವು ಬೆಳಗ್ಗಿನ ಜಾವಾ 3.45 ರಿಂದ 4 ಗಂಟೆಯ ಸಮಯದಲ್ಲಿ ಮೋರಾರ್ಜಿ ದೇಸಾಯಿ ಶಾಲೆಯ ಬಳಿ ಇದ್ದ ಡಿವೈಡರ್ ಅನ್ನು ಹತ್ತಿಸಿ ಡಿವೈಡರ್ ಬಳಿ ಇದ್ದ ಸ್ಟ್ಯಾಂಡ್ ಗೆ ಡಿಕ್ಕಿಯಾಗಿ

ಅಪಘಾತವಾಗಿರುತ್ತದೆ ಎಂದು, ಆರೋಪಿಯು ಚಾಲಕನ ಸೀಟಿನ ಬಳಿಯ ಬಾಗಿಲಿನ ಬಳಿ ತಲೆ ಕೆಳಕ್ಕೆ ಕಾಲು ಮೇಲಾಗಿ ಬಿದ್ದಿದ್ದರು ಎಂದು, ಇನ್ನೊರ್ವ ಮ್ಯಾಕಾನಿಕ್ ಆದ ಚಾಸಾ 2 ರವರು ಮುಂದಿನ ಗಾಜಿನಿಂದ ಹೊರಕ್ಕೆ ಬಂದು ರಸ್ತೆಗೆ ಬದ್ದಿದ್ದರು ಎಂದು, ನಾನು ಸೀಟುಗಳ ನಡುವೆ ಬಿದ್ದಿದ್ದು, ನನ್ನ ತಲೆಗೆ, ಎಡಗಾಲಿಗೆ, ಪಕ್ಕೆಲುಬಿಗೆ ತೀವ್ರ ಸ್ವರೂಪದ ಗಾಯವಾಗಿದ್ದು, ಚಾಸಾ 2 ರವರಿಗೆ ಬೆನ್ನು ಮೂಳೆಗೆ ಪೆಟ್ಟಾಗಿತ್ತು ಎಂದು, ಚಾಸಾ 3 ರವರ ತಲೆಗೆ ತೆರೆದ ಗಾಯವಾಗಿತ್ತು ಮತ್ತು ದೇಹದ ಇತರ ಭಾಗಕ್ಕೆ ಗಾಯಗಳು ಆಗಿತ್ತು ಎಂದು, ಆರೋಪಿಗೆ ತಲೆಗೆ ಹೊಟ್ಟೆಗೆ ಕಾಲಿಗೆ ಗಾಯವಾಗಿತ್ತು ಎಂದು, ನಂತರ, ಅಂಬೂಲೆನ್ಸ್‌ನಲ್ಲಿ ನಾವು ಕಡೂರಿನ ಆಸ್ಪತ್ರೆಗೆ ಹೋಗಿದ್ದು, ನಂತರ ನಾನು, ಚಾಸಾ 2, ಆರೋಪಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ನಂತರ ಚಾಸಾ 3 ರವರು ಅಧಿಚುಂಚನಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಈ ಅಪಘಾತದ ಕುರಿತು ನಾನು ಚಿಕಿತ್ಸೆ ಪಡೆದುಕೊಂಡ ನಂತರ ದಿಃ26.03.2024 ರಂದು ದೂರು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಗಾಯಾಳು ಹಾಗೂ ಪ್ರತ್ಯಕ್ಷಸಾಕ್ಷಿಯಾದ ಚಾಸಾ-3/ಪ್ರಾಸಾ-2 ಮಹಾಂತೇಶ ರವರನ್ನು ವಿಚಾರಣೆಗೆ ಒಳಪಡಿಸಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಾನು ಅರಸೀಕೆರೆ ಡಿಪೋದಲ್ಲಿ ಕಳೆದ 4 ವರ್ಷದಿಂದ ಕೆ ಎಸ್ ಆರ್ ಟಿ ಸಿ ಬಸ್ಸು ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದು, ಆರೋಪಿಯು ಚಾಲಕ-ಕಂ-ನಿರ್ವಾಹಕನಾಗಿ ಕೆಲಸ ಮಾಡುತ್ತಾರೆ ಎಂದು, 2024 ರ ಜನವರಿನಲ್ಲಿ ಒಂದು ದಿನ ಕೆ ಎಸ್ ಆರ್ ಟಿ ಸಿ ಬಸ್ಸು ಸಂ.ಕೆಎ 18 ಎಫ್ 832 ರ ಬಸ್ಸಿನಲ್ಲಿ ನಾನು ಚಾಲಕನಾಗಿ

ಆರೋಪಿಯು ನಿರ್ವಾಹಕನಾಗಿ ಹೋಗುತ್ತಿರುವಾಗ, ಭದ್ರಾವತಿಯ ಕಾರೇಹಳ್ಳಿ ಬಳಿ ಫ್ರಂಟ್ ಬ್ಲೆಡ್ ಕಟ್ಟಾಗಿರುತ್ತದೆ. ನಂತರ ನಾವು ಈ ವಿಚಾರವನ್ನು ಅರಸೀಕೆರೆ ಡಿಪೋಗೆ ಪೋನ್ ಮಾಡಿ ತಿಳಿಸಿದೆವು, ನಂತರ ರಾತ್ರಿ ಸು.8 ಗಂಟೆಗೆ ಚಾಸಾ 1, 2 ರವರು ರಿಪೇರಿ ಮಾಡಲು ಬಂದರು ಎಂದು, ಆ ದಿನ ಸದರಿ ಬಸ್ಸನ್ನು ಚಾಸಾ 1, 2ರವರು ರಿಪೇರಿ ಮಾಡುವ ಮುಗಿಯುವಷ್ಟರಲ್ಲಿ ರಾತ್ರಿ 1.30 ಆಗಿತ್ತು ಎಂದು, ಸದರಿ ಬಸ್ಸು ಸಂಪೂರ್ಣವಾಗಿ ರಿಪೇರಿ ಆಗಿರಲಿಲ್ಲ ಎಂದು, ಆ ಕಾರಣ ಡಿಪೋಗೆ ಸಂಪೂರ್ಣ ರಿಪೇರಿ ಮಾಡಿಸಲು ಹೋಗೋಣಾ ಎಂದು ನಿರ್ದರಿಸಿದ್ದು, ಆ ನಂತರ ನಾನೇ ಸದರಿ ಬಸ್ಸನ್ನು ಚಾಲನೆ ಮಾಡಿಕೊಂಡು ತರೀಕೆರೆ ಸಮೀಪದ ಎಂ.ಸಿ.ಹಳ್ಳಿವರೆಗೂ ಬಂದಿದ್ದು, ಅಲ್ಲಿ ಬಸ್ಸನ್ನು ಸೈಡಿಗೆ ನಿಲ್ಲಿಸಿ ಸ್ವಲ್ಪ ಸಮಯ ವಿಶ್ರಾಂತಿ ತೆಗೆದುಕೊಂಡು ನಂತರ ಹೋಗೋಣಾ ಎಂದು ಬಸ್ಸಿನಲ್ಲಿ ನಾವುಗಳು ಮಲಗಿದ್ದೆವು ಎಂದು, ಸ್ವಲ್ಪ ಸಮಯದ ನಂತರ ನಾವು ಎಚ್ಚರಗೊಂಡಾಗ ಬಸ್ಸು ಚಲಿಸುತ್ತಿತ್ತು, ನಾನು ನೋಡಿದಾಗ, ಆರೋಪಿಯು ನನಗೆ ಯಾವುದೇ ಮಾಹಿತಿ ನೀಡದೆ ಬಸ್ಸನ್ನು ಚಾಲನೆ ಮಾಡಿಕೊಂಡು ಹೋಗಿ ಅಪಘಾತ ಪಡಿಸಿರುತ್ತಾರೆ ಎಂದು, ಅಪಘಾತದಿಂದ ನನ್ನ ತಲೆಗೆ ತೀವ್ರ ಗಾಯವಾಗಿ ನನಗೆ ಪ್ರಜ್ಞೆ ಇರಲಿಲ್ಲ ಎಂದು, ನನಗೆ ಪ್ರಜ್ಞೆ ಬಂದಾಗ ನಾನು ಕಡೂರಿನ ಆಸ್ಪತ್ರೆಯಲ್ಲಿ ಇದ್ದೆನು ಎಂದು, ನಂತರದಲ್ಲಿ ಅಪಘಾತದ ಬಗ್ಗೆ ವಿಚಾರಿಸಿದಾಗ, ಸದರಿ ಅಪಘಾತವು ಬೆಳಗ್ಗಿನ ಜಾವಾ 3.45 ರಿಂದ 4 ಗಂಟೆಯ ಸಮಯದಲ್ಲಿ ಮೋರಾರ್ಜಿ ದೇಸಾಯಿ ಶಾಲೆಯ ಬಳಿ ಇದ್ದ ಡಿವೈಡರ್ ಅನ್ನು ಹತ್ತಿಸಿ ಡಿವೈಡರ್ ಬಳಿ ಇದ್ದ ಸ್ಟ್ಯಾಂಡ್ ಗೆ ಡಿಕ್ಕಿಯಾಗಿ ಅಪಘಾತವಾಗಿರುತ್ತದೆ ಎಂದು ತಿಳಿದುಬಂದಿರುತ್ತದೆ ಎಂದು, ನಂತರ, ಬಸ್ಸಿನಲ್ಲಿದ್ದ ಎಲ್ಲರಿಗೂ ಗಾಯಗಳು

ಆಗಿರುತ್ತದೆ ಎಂದು ನನಗೆ ತಿಳಿದುಬಂದಿರುತ್ತದೆ ಎಂದು, ನಂತರ ನನ್ನ ಸಂಬಂಧಿಕರು ಬಂದು ನನ್ನನ್ನು ಅಧಿಚುಂಚನಗಿರಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದು, ಅಪಘಾತದಿಂದ ನನ್ನ ತಲೆಗೆ ಮತ್ತು ಎಡ ಎದೆಯ ಮೂಳೆಗೆ ಪೆಟ್ಟಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**14.** ಚಾಸಾ-4 / ಪ್ರಾಸಾ-3 ರಾಜೇಶ್ ಈ ಪ್ರಕರಣದ ಸಾಂಧರ್ಬಿಕ ಮತ್ತು ಸ್ಥಳ ತೋರಿಸಿದ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಾನು ಕಡೂರು ಡಿಪೋದಲ್ಲಿ ಟಿ ಸಿ ಆಗಿ ಕಳೆದ 4 ವರ್ಷದಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದು, ಚಾಸಾ 1 ರಿಂದ 3, 5, 6 ಮತ್ತು ಆರೋಪಿ ನನಗೆ ಗೊತ್ತು ಎಂದು, ದಿಃ26.03.2024 ರಂದು ರಾತ್ರಿ ಸು.1.30 ಗಂಟೆಗೆ ನನ್ನ ಹಿರಿಯ ಅಧಿಕಾರಿ ನನಗೆ ಪೋನ್ ಮಾಡಿ ಅಪಘಾತದ ವಿಚಾರ ತಿಳಿಸಿ ಅಪಘಾತ ನಡೆದ ಸ್ಥಳವಾದ ಕುಪ್ಪಾಳಿಗೆ ಹೋಗುವಂತೆ ನಿರ್ದೇಶನ ನೀಡಿರುತ್ತಾರೆ ಎಂದು, ಅದರಂತೆ ನಾನು ಅಪಘಾತ ಸ್ಥಳಕ್ಕೆ ರಾತ್ರಿ ಸು.2 ಗಂಟೆಗೆ ಹೋಗಿರುತ್ತೇನೆ. ಸ್ಥಳದಲ್ಲಿ ನೋಡಿದಾಗ, ಕೆ.ಎಸ್.ಆರ್.ಟಿ.ಸಿ ಬಸ್ಸು ಡಿವೈಡರ್ ಗೆ ಡಿಕ್ಕಿಯಾಗಿ ಅಪಘಾತವಾಗಿತ್ತು ಎಂದು, ಗಾಯಾಳುಗಳಾದ ಚಾಸಾ 1 ರಿಂದ 3, ಆರೋಪಿ ಯನ್ನು ಅಂಬೂಲೆನ್ಸ್ ಮೂಲಕ ಕಡೂರು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು, ಅಪಘಾತ ಹೇಗೆ ಆಯಿತು ಎಂಬ ಕುರಿತು ನಾನು ಚಾಸಾ 1 ರವರಿಂದ ಕೇಳಿ ತಿಳಿದುಕೊಂಡಿರುತ್ತೇನೆ ಎಂದು, ಚಾಸಾ 1 ರವರು ಬಸ್ಸು ಕೆಟ್ಟು ನಿಂತಿತ್ತು, ಅದನ್ನು ತಾತ್ಕಾಲಿಕವಾಗಿ ಚಾಸಾ 1, 2 ರವರು ರಿಪೇರಿ ಮಾಡಿಕೊಟ್ಟಿದ್ದರು, ನಂತರ ಬಸ್ಸಿನಲ್ಲಿ ಮಲಗಿಕೊಂಡಿದ್ದಾಗ, ಆರೋಪಿಯು ಮಧ್ಯರಾತ್ರಿಯಲ್ಲಿ ಬಸ್ಸನ್ನು ಚಾಲನೆ ಮಾಡಿಕೊಂಡು

ಬಂದು ಈ ಅಪಘಾತ ಪಡಿಸಿರುತ್ತಾನೆ ಎಂದು ನನಗೆ ತಿಳಿಸಿರುತ್ತಾರೆ ಎಂದು, ನಂತರ, ದಿಃ27.03.2024 ರಂದು ಸಂಜೆ 5.30 ಗಂಟೆಯಲ್ಲಿ ಪೊಲೀಸರು ಅಪಘಾತ ಸ್ಥಳದಲ್ಲಿ ನನ್ನ ಮತ್ತು ಚಾಸಾ 6 ಮತ್ತು ಇನ್ನೊಬ್ಬರ ಸಮಕ್ಷಮ ಮಹಜರ್ ಮಾಡಿ ನನ್ನ ಸಹಿ ಪಡೆದರು ಎಂದು, ನಂತರ, ನಾವು ಪೊಲೀಸ್ ಠಾಣೆಗೆ ಹೋಗಿ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅಮಾನತ್ತು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು, ಸದರಿ ಮಹಜರ್ ಅನ್ನು 6.30 ರಿಂದ 7 ಗಂಟೆಯಲ್ಲಿ ಬರೆದಿರುತ್ತಾರೆ ಮತ್ತು ಪೋಟೋ ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ.

ಸದರಿ ಸಾಕ್ಷಿಯು ಅಭಿಯೋಜನೆಯ ಪರ ಪಾಟೀ ಸವಾಲಿನಲ್ಲಿ ನನ್ನ ಮೇಲಾಧಿಕಾರಿಗಳು ಅಪಘಾತದ ವಿಚಾರ ತಿಳಿಸಿ ಅಪಘಾತದ ಸ್ಥಳಕ್ಕೆ ಹೋಗುವಂತೆ ತಿಳಿಸಿದರು ಎಂದರೆ ಸರಿ ಎಂದು, ಸದರಿ ಬಸ್ಸಿಗೆ ಬಸ್ಸು ಚಾಲಕನಾಗಿ ಚಾಸಾ 3 ರವರು ಹಾಗೂ ಕಂಡಕ್ಟರ್ ಆಗಿ ಆರೋಪಿಯನ್ನು ನೇಮಿಸಿದ್ದರು ಎಂದರೆ ಸರಿ ಎಂದು, ಚಾಸಾ 1, 2 ರವರು ಮ್ಯಾಕ್ಯಾನಿಕ್ ಆಗಿ ಕಳುಹಿಸಲಾಗಿತ್ತು ಎಂದರೆ ಸರಿ ಎಂದು, ಚಾಸಾ 1 ರಿಂದ 3 ಮತ್ತು ಆರೋಪಿತರಿಗೆ ಅಪಘಾತದಿಂದ ಗಾಯಗಳು ಆಗಿತ್ತು ಹಾಗೂ ನಾನು ಕಡೂರಿನ ಆಸ್ಪತ್ರೆಗೆ ಹೋಗಿ ನೋಡಿರುತ್ತೇನೆ ಎಂದರೆ ಸರಿ ಎಂದು, ದಿಃ22.03.2024 ರಂದು ಬೆಳಗ್ಗೆ ಸು.11.00 ಗಂಟೆಗೆ ಸದರಿ ಬಸ್ಸು ಬ್ರೇಕ್ ಕಟ್ ಆಗಿ ಕೆಟ್ಟು ನಿಂತಿತ್ತು ಎಂದು ನನಗೆ ಮಾಹಿತಿ ಬಂದಿರುತ್ತದೆ ಎಂದರೆ ಸರಿ ಎಂದು, ಆ ನಂತರ ಚಾಸಾ 1, 2 ರವರನ್ನು ನಾವು ಸರಿಪಡಿಸಲು ಕಳುಹಿಸಿಕೊಟ್ಟಿರುತ್ತೇವೆ ಎಂದರೆ ಸರಿ ಎಂದು, ಚಾಸಾ 1, 2 ರವರು ರಾತ್ರಿ 9 ಗಂಟೆಗೆ ಭದ್ರಾವತಿಯ ಕಾರೆಹಳ್ಳಿ ಗ್ರಾಮಕ್ಕೆ ತಲುಪಿ ಬಸ್ಸನ್ನು ತಾತ್ಕಾಲಿಕವಾಗಿ ರಾತ್ರಿ 1.30

ಗಂಟೆಯ ವರೆಗೂ ರಿಪೇರಿ ಮಾಡಿರುತ್ತಾರೆ ಎಂದರೆ ಸರಿ ಎಂದು, ಆ ನಂತರ ಚಾಸಾ 3 ರವರು ಎಂ ಸಿ ಹಳ್ಳಿ ವರೆಗೂ ಬಸ್ಸು ಚಾಲನೆ ಮಾಡಿಕೊಂಡು ಬಂದು ಸುಸ್ತಾಗಿದೆ ಎಂದು ಮಲಗಿರುತ್ತಾರೆ ಎಂದು ತಿಳಿಸಿದರು ಎಂದರೆ ಸರಿ ಎಂದು, ಸದರಿ ಸ್ಥ,ಳದಿಂದ ಆರೋಪಿಯೇ ಏಕಾಏಕಿ ಬಸ್ಸನ್ನು ತೆಗೆದುಕೊಂಡು ಚಾಲನೆ ಮಾಡಿಕೊಂಡು ಬಂದು ರಾತ್ರಿ 3.45 ಗಂಟೆಗೆ ಜೋರಾಗಿ ಶಬ್ಧ ಬಂದಿದ್ದನ್ನು ಕೇಳಿಕೊಂಡು ಮಲಗಿದ್ದ ಚಾಸಾ 1, 2 ರವರು ನೋಡಿದಾಗ ಅಪಘಾತವಾಗಿ ಆರೋಪಿಗೆ ಮತ್ತು ಚಾಸಾ 3 ರವರಿಗೆ ಗಾಯಗಳು ಆಗಿತ್ತು ಎಂದು ತಿಳಿಸಿರುತ್ತಾರೆ ಎಂದರೆ ಸರಿ ಎಂದು, ಚಾಸಾ 1 ರವರಿಗೆ ತಲೆಗೆ, ಪಕ್ಕೆಲುಬಿಗೆ, ಎಡ ತೊಡೆಗೆ ಹಾಗೂ ಚಾಸಾ 2 ರವರ ತಲೆಗೆ ಬೆನ್ನಿಗೆ ಗಾಯಗಳು ಆಗಿತ್ತು ಎಂದು ತಿಳಿಸಿರುತ್ತಾರೆ ಎಂದರೆ ಸರಿ ಎಂದು, ಸದರಿ ಬಸ್ಸು ಅಲ್ಲಿ ಇದ್ದ ಡಿವೈಡರ್ ಮತ್ತು ಮಧ್ಯದಲ್ಲಿ ಹಾಕಿದ್ದ ಕಬ್ಬಿಣದ ಕಂಬಕ್ಕೆ ಡಿಕ್ಕಿ ಹೊಡೆದು ನಿಂತಿತ್ತು ಎಂದರೆ ಸರಿ ಎಂದು, ನಂತರ, ಚಾಸಾ 1 ಅಂಬೂಲೆನ್ಸ್‌ಗೆ ಫೋನ್ ಮಾಡಿದರು ಎಂದು ತಿಳಿಸಿರುತ್ತಾರೆ ಎಂದರೆ ಸರಿ ಎಂದು, ಸ್ಥ,ಳ ಪಂಚನಾಮೆ ಕಾಲದಲ್ಲಿ ಮತ್ತು ಅಮಾನತ್ತು ಮಹಜರ್ ಗೆ ಚಾಸಾ 5 ರವರು ಸಹಿ ಮಾಡಿದ್ದಾರೆ ಎಂದರೆ ಸರಿ ಎಂದು ಒಪ್ಪಿರುತ್ತಾರೆ.

**15.** ಚಾಸಾ-5 / ಪ್ರಾಸಾ-4 ಜಗದೀಶ್ ಈ ಪ್ರಕರಣದ ಮಹಜರು ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಾನು ಪೋಲೀಸರ ಕೋರಿಕೆಯ ಮೇರೆಗೆ, ಊರಿಗೆ ಹೋಗುತ್ತಿದ್ದಾಗ, ಸುಮಾರು 1 ವರ್ಷದ ಹಿಂದೆ ಸಹಿ ಮಾಡಿದ್ದು, ನಿಪಿ-2, 3 ಮತ್ತು 5 ಛಾಯಾಚಿತ್ರವನ್ನು ಯಾವ ಕಾರಣಕ್ಕೆ ತೆಗೆದರು ಎಂದು ನನಗೆ ಗೊತ್ತಿಲ್ಲ ಎಂದು, ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಮತ್ತು ಯಾವುದೇ

ವಾಹನ ಅಮಾನತ್ತುಪಡಿಸಿಕೊಂಡಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದಾಗ್ಯೂ, ಅಭಿಯೋಜನೆಗೆ ಉಪಯುಕ್ತವಾದಂತಹ ಅಂಶಗಳನ್ನು ಹೊರತಂದಿರುವುದಿಲ್ಲ.

**16.** ಚಾಸಾ-2 / ಫ್ರಾಸಾ-6 ಅಜಯ್ ಕುಮಾರ್ , ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 22.03.2024 ರಂದು ಭದ್ರಾವತಿ ಸಮೀಪದ ಕಾರೇಹಳ್ಳಿ ಗ್ರಾಮದಲ್ಲಿ ಬೆಳಿಗ್ಗೆ 11.00 ಗಂಟೆಗೆ ಕೆ.ಎಸ್.ಆರ್.ಟಿ.ಸಿ. ಬಸ್ಸು ಸಂಖ್ಯೆಃ ಕೆಎ 18 ಎಫ್ 0832 ರ ಸ್ಪ್ರಿಂಗ್ ಸೆಟ್ ಕಟ್ ಆಗಿತ್ತು ಎಂದು, ಆ ಬಗ್ಗೆ ಚಾಸಾ-3 ರವರು ನನಗೆ ಕರೆ ಮಾಡಿ ಮೇಲಾಧಿಕಾರಿಯವರಿಗೆ ತಿಳಿಸಿದ್ದರು ಎಂದು, ಸದರಿಯವರು ಸಂಜೆ 6.00 ಗಂಟೆಗೆ ನನಗೆ ಸ್ಥಳಕ್ಕೆ ಹೋಗಲು ಹೇಳಿದ್ದರು, ಅದರಂತೆ ನಾನು ಮತ್ತು ಚಾಸಾ-1 ರವರು ರಾತ್ರಿ 9.00 ಗಂಟೆಗೆ ಸ್ಥಳಕ್ಕೆಹೋಗಿರುತ್ತೇವೆ ಎಂದು, ರಾತ್ರಿ ಸುಮಾರು 1.30 ವರೆಗೂ ಸದರಿ ಬಸ್ಸನ್ನು ರಿಪೇರಿ ಮಾಡಿರುತ್ತೇವೆ ಎಂದು, ನಂತರ ಚಾಸಾ-3 ರವರು ಸದರಿ ಬಸ್ಸನ್ನು ಎಂ.ಸಿ. ಹಳ್ಳಿಯವರೆಗೂ ಚಾಲನೆ ಮಾಡಿರುತ್ತಾರೆ ಎಂದು, ಚಾಸಾ-3 ರವರು ನನಗೆ ನಿದ್ರೆ ಬರುತ್ತಿದ್ದು, ಮರು ದಿನ ಬಸ್ಸನ್ನು ಘಟಕಕ್ಕೆ ತೆಗೆದುಕೊಂಡು ಹೋಗುವುದಾಗಿ ಹೇಳಿದರು ಎಂದು, ನಾಲ್ಕು ಜನರು ಬಸ್ಸಿನಲ್ಲಿ ಮಲಗಿದ್ದೆವು ಎಂದು, ಸ್ವಲ್ಪ ಸಮಯದ ನಂತರ ಆರೋಪಿಯು ಸೊಳ್ಳೆಗಳ ಕಾಟ ಇದೆ ಎಂದು ಸದರಿ ಬಸ್ಸನ್ನು ಚಾಲನೆ ಮಾಡಿದರು ಎಂದು, ಬೆಳಗಿನ ಜಾವ 3.30 ರ ಸಮಯದಲ್ಲಿ ಅಂಚೆಬೋಮನಹಳ್ಳಿ ಬಳಿ ಇರುವ ಡಿವೆಡರ್ ಗೆ ಬಸ್ಸು ಡಿಕ್ಕಿಯಾಗಿರುತ್ತದೆ ಎಂದು, ಆ ಬಗ್ಗೆ ಆರೋಪಿಯನ್ನು ಕೇಳಲಾಗಿ

ಪ್ರಾಣಿಯು ಅಡ್ಡ ಬಂದಿದ್ದು ತಡೆಯಲು ಪ್ರಯತ್ನಿಸಿದ್ದರಿಂದ ಡಿಕ್ಕಿಯಾಗಿದೆ ಎಂದು, ಸದರಿ ಡಿಕ್ಕಿಯಿಂದ ನನ್ನ ತಲೆ, ಬೆನ್ನು, ಸೊಂಟಕ್ಕೆ ಪೆಟ್ಟಾಗಿದ್ದು, ಚಾಸಾ-1 ರವರ ಬೆನ್ನು, ಪಕ್ಕೆಲುಬು ಮತ್ತು ಎದೆಗೆ ಪೆಟ್ಟಾಗಿತ್ತು. ಚಾಸಾ-3 ರವರ ತಲೆ ಮತ್ತು ಬೆನ್ನಿಗೆ ಪೆಟ್ಟಾಗಿತ್ತು ಎಂದು ಸದರಿ ವೇಳೆಯಲ್ಲಿ ಅಂಬ್ಯುಲೆನ್ಸ್ ಮೂಲಕ ಕಡೂರು ಆಸ್ಪತ್ರೆಗೆ ಬಂದಿರುತ್ತೇನೆ ಎಂದು, ಕಡೂರು ಆಸ್ಪತ್ರೆಯವರು ಶಿವಮೊಗ್ಗದ ಆಸ್ಪತ್ರೆಗೆ ದಾಖಲಾಗುವಂತೆ ಹೇಳಿದ್ದು, ನಂತರ ನಾನು ದಾವಣಗೆರೆಯ ಸಿ.ಟಿ. ಸೆಂಟ್ರಲ್ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಸದರಿ ಆಸ್ಪತ್ರೆಯಲ್ಲಿ ನನ್ನ ತಲೆಗೆ ಪೆಟ್ಟಾಗಿದ್ದ ಬಗ್ಗೆ ಶಸ್ತ್ರ ಚಿಕಿತ್ಸೆ ಆಗಿರುತ್ತದೆ ಎಂದು, ಸದರಿ ವಿಚಾರಗಳನ್ನು ನಾನು ಪೋಲೀಸರಿಗೆ ಹೇಳಿಕೆಯಾಗಿ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**17.** ಚಾಸಾ-6 / ಫ್ರಾಸಾ-7 ರಾಜಪ್ಪ ಈ ಪ್ರಕರಣದ ಮಹಜರು ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ 4 ರವರು ಅಪಘಾತವಾಗಿದೆ ಎಂದು ತೋರಿಸಿದ ಸ್ಥಳದಲ್ಲಿ ಮಹಜರಿಗೆ ಸಹಿ ಮಾಡಿದ್ದು, ಸದರಿ ಸ್ಥಳದಲ್ಲಿ ಮಹಜರ್ ಬರೆದಿರುತ್ತಾರೆ, ಆಗ ನಾನು, ಪೊಲೀಸರು, ಚಾಸಾ 5 ಹಾಜರು ಇದ್ದೆವು ಎಂದು, ಸ್ಥಳದಲ್ಲಿ ಮಹಜರ್ ಅನ್ನು ಸಂಜೆ 5 ರಿಂದ 5.45 ಗಂಟೆಯಲ್ಲಿ ಬರೆಯಲಾಗಿದೆ ಎಂದು, ಪೊಲೀಸರು ಠಾಣೆಯಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಅಮಾನತ್ತು ಪಡಿಸಿಕೊಂಡಾಗ ಸಂಜೆ 6 ರಿಂದ 6.30 ರ ಸಮಯದಲ್ಲಿ ಸಹಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ.

ಸದರಿ ಸಾಕ್ಷಿಯನ್ನು ಅಭಿಯೋಜನೆಯ ಪರ ಪಾಟೀ ಸವಾಲಿಗೆ ಒಳಪಡಿಸಿದಾಗ, ತಮ್ಮ ಪಾಟೀ ಸವಾಲಿನಲ್ಲಿ ದಿಃ27.03.2024 ರಂದು ಅಪಘಾತದ ವಿಚಾರವಾಗಿ ಪೊಲೀಸರು ಮಹಜರಿಗೆ ಬನ್ನಿ ಎಂದು ನನಗೆ ಮತ್ತು ಚಾಸಾ 5 ರವರಿಗೆ ನಿಪಿ 7 ರಂತೆ ನೋಟೀಸು ನೀಡಿದರು ಎಂದರೆ ಸರಿ ಎಂದು, ಅದೇ ದಿನ ನಿಪಿ 6 ರ ಅಮಾನತ್ತು ಪಂಚನಾಮೆ ವೇಳೆಯಲ್ಲಿ ನಿಪಿ 2, 3 ರ ಪೋಟೋದಲ್ಲಿ ಕಾಣುವ ಬಸ್ಸ ಅನ್ನು ಅಮಾನತ್ತು ಪಡಿಸಿಕೊಂಡು ಪೋಟೋ ತೆಗೆಯಲಾಯಿತು ಎಂದರೆ ಸರಿ ಎಂದು ಒಪ್ಪಿರು ತ್ತಾರೆ.

**18.** ಈ ಪ್ರಕರಣದ ತನಿಖಾಧಿಕಾರಿಗಳಾದ ಚಾಸಾ-10/ ಫ್ರಾಸಾ-5 ವೇದಮೂರ್ತಿ, ಎ.ಎಸ್.ಐ. ತಮ್ಮ ಮುಖ್ಯ ವಿಚಾರಣಾ ಸಾಕ್ಷದಲ್ಲಿ ದಿಃ11.04.2024 ರಂದು ಚಾಸಾ 9 ರವರಿಂದ ಈ ಕೇಸಿನ ಕಡತವನ್ನು ಪಡೆದು ಪರಿಶೀಲನೆ ಮಾಡಿ, ಅದೇ ದಿನ ಚಾಸಾ 1 ರಿಂದ 3 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು, ದಿಃ03.05.2024 ರಂದು ಚಾಸಾ 2 ಮತ್ತು 3 ರವರ ಹೇಳಿಕೆ ಪಡೆದು, ನಂತರ ಆರೋಪಿಯ ವಿರುದ್ಧ ಆರೋಪ ಸಾಭೀತಾಗಿದ್ದರಿಂದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ.

**19.** ಅಪಘಾತ ಪ್ರಕರಣಗಳಲ್ಲಿ ಅಭಿಯೋಜನೆಯು ಈ ಕೆಳಗಿನ ಅಂಶಗಳನ್ನು ರುಜುವಾತುಪಡಿಸಬೇಕಾಗಿರುತ್ತದೆ.

1) ಆರೋಪಿ ರವರು ಅತೀವೇಗ ಹಾಗೂ ಅಜಾಗರೂಕತೆಯಿಂದ ವಾಹನವನ್ನು ಚಲಾಯಿಸಿರುವ ಬಗ್ಗೆ

2) ಆರೋಪಿ ರವರು ಮಾನವ ಜೀವಕ್ಕೆ ಹಾನಿಯಾಗುವ ರೀತಿ

ವಾಹನವನ್ನು ಚಲಾಯಿಸಿರುತ್ತಾರೆ ಎನ್ನುವ ಬಗ್ಗೆ

**20.** ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿದಂತಹ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಚಾಸಾ-1 ಮತ್ತು ಚಾಸಾ-2 ರವರು ಗಾಯಾಳುವಾಗಿದ್ದು ಆತನನ್ನು ಹೊರತುಪಡಿಸಿ ಇತರ ಪ್ರತ್ಯಕ್ಷ ಸಾಕ್ಷಿದಾರರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ. ಚಾಸಾ-3 ರವರು ಸಾಂಧರ್ಭಿಕ ಸಾಕ್ಷಿದಾರರಾಗಿದ್ದು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ, ಪೂರಕ ಸಾಕ್ಷ್ಯದ ಹೊರತು ಸದರಿಯವರ ಸಾಕ್ಷ್ಯಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ ಹಾಗೂ ಆರೋಪಿಯೂ ಕೂಡ ಗಾಯಾಳುವಾಗಿದ್ದು, ಆರೋಪಿಯ ತಪ್ಪಿ ನಿಂದಲೇ ಅಪಘಾತವಾಗಿದೆ ಎಂದು ನಂಬಲು ಯಾವುದೇ ಪ್ರತ್ಯಕ್ಷ ಸಾಕ್ಷಿದಾರರ ಲಭ್ಯತೆ ಇಲ್ಲ. ಈ ಪ್ರಕರಣದಲ್ಲಿ ಅಪಘಾತವಾಗಿರುವುದು ಸಾಬೀತಾಗಿದ್ದಾಗ್ಯೂ ಕೂಡ, ಸದರಿ ಅಪಘಾತವು ಆರೋಪಿಯು ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಲಾಯಿಸಿದ್ದರಿಂದ ಆಗಿದೆ ಎಂದು ಸಾಬೀತು ಪಡಿಸುವುದೂ ಕೂಡ ಮುಖ್ಯವಾಗಿರುತ್ತದೆ. ಆದರೆ ಗಾಯಾಳುಗಳು ಯಾರೂ ಕೂಡ ಅಪಘಾತದ ಪ್ರತ್ಯಕ್ಷದರ್ಶಿಗಳಲ್ಲದ ಕಾರಣ ಅಪಘಾತವು ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯಿಂದ ಆಗಿದೆ ಎಂದು ನಂಬಲು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ ಚಾಸಾ-1 ರಿಂದ 3 ರವರು ತಮ್ಮ ಸಾಕ್ಷ್ಯದಲ್ಲಿ ಬಸ್ ಸಂಪೂರ್ಣವಾಗಿ ರಿಪೇರಿ ಆಗಿರಲಿಲ್ಲ ಎಂದು ಹೇಳಿರುವ ಅಂಶವು ಕೂಡ ಬಸ್ಸಿನ ತಾಂತ್ರಿಕ ದೋಷದಿಂದ ಅಪಘಾತವಾಗಿರಬಹುದೆಂಬ ಅನುಮಾನ ಉಂಟು ಮಾಡುತ್ತದೆ. ಈಗಾಗಲೇ ಹೇಳಿದಂತೆ ಅಪಘಾತ ಉಂಟಾಗಿರುವುದು ಸತ್ಯವೇ ಆದರೂ ಕೂಡ ಸದರಿ ಅಪಘಾತವು ಆರೋಪಿಯ ನಿರ್ಲಕ್ಷ್ಯತೆ ಮತ್ತು ಅತಿವೇಗದ

ಚಾಲನೆಯಿಂದ ಆಗಿದೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತು ಪಡಿಸಲು ವಿಫಲವಾಗಿದೆ. ಆದ್ದರಿಂದ ಸದರಿ ಸಂಶಯದ ಲಾಭವನ್ನು ಆರೋಪಿಗೆ ನೀಡಲಾಗಿದೆ ಎಂದು ಪರಿಗಣಿಸಿ ಅಂಶ **1** ರಿಂದ **3** ನ್ನು ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**21.** <u>ಅಂಶ ನಂ.**4**</u> :- ಈ ಮೇಲ್ಕಂಡ ಕಾರಣಗಳಿಂದಾಗಿ ಈ ಅಂಶವನ್ನು ಕೆಳಕಂಡಂತೆ ಆದೇಶ ಮಾಡುತ್ತೇನೆ.

## ::ಆದೇಶ ::

ದಂಡ ಪ್ರಕ್ರಿಯಾ ಸಂಹಿತೆ ಕಲಂ.255(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯ ವಿರುದ್ಧ ಮಾಡಲಾದ ಭಾರತೀಯ ದಂಡ ಸಂಹಿತೆಯ ಕ ಕಲಂ.279, 337, 338 ರಡಿಯಲ್ಲಿನ ಆರೋಪಗಳಿಂದ ಆರೋಪಿಯನ್ನು ಈ ಮೊಕದ್ದಮೆಯಿಂದ ಖುಲಾಸೆಗೊಳಿಸಲಾಗಿದೆ.

ಆರೋಪಿ ಮತ್ತು ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 436 ಪ್ರಕಾರ ಈ ದಿನದಿಂದ ಮುಂದಿನ 6 ತಿಂಗಳ ವರೆಗೆ ಚಾಲ್ತಿಯಲ್ಲಿರುತ್ತದೆ.

*(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿದ ನಂತರ ಅದನ್ನು ತಿದ್ದಿ ಪರಿಷ್ಕರಿಸಿ ದಿನಾಂಕ 03ನೇ ಜುಲೈ 2026 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.)*

NALINA S C Digitally signed by NALINA S C Date: 2026.08.04 12:30:38 +0530

**( ನಳಿನ ಎಸ್.ಸಿ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕಡೂರು.

## ಅನುಬಂಧ

1. ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ

ಫ್ರಾ.ಸಾ-1 - ಶಿವಲಿಂಗಪ್ಪ
ಫ್ರಾ.ಸಾ-2 - ಮಹಾಂತೇಶ
ಫ್ರಾ.ಸಾ-3 - ರಾಜೇಶ
ಫ್ರಾ.ಸಾ-4 - ಜಗದೀಶ
ಫ್ರಾ.ಸಾ-5 - ವೇದಮೂರ್ತಿ
ಫ್ರಾ.ಸಾ-6 - ಅಜಯ್ ಕುಮಾರ
ಫ್ರಾ.ಸಾ-7 - ರಾಜಪ್ಪ

2. ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ :

ನಿಪಿ-1 - ದೂರು.
ನಿಪಿ-1(ಎ) - ಫ್ರಾಸಾ-1 ರವರ ಸಹಿ.
ನಿಪಿ-2 ಮತ್ತು 3 - ಛಾಯಾಚಿತ್ರಗಳು
ನಿಪಿ-4 - ಸ್ಥಳ ಮಹಜರ್.
ನಿಪಿ-4(ಎ ಮತ್ತು ಬಿ) - ಫ್ರಾಸಾ-1 ರವರ ಸಹಿ.
ನಿಪಿ-5 - ಛಾಯಾಚಿತ್ರ
ನಿಪಿ-6 - ಅಮಾನತ್ತು ಮಹಜರ್.
ನಿಪಿ-6(ಎ ಮತ್ತು ಬಿ) - ಸಹಿಗಳು.
ನಿಪಿ-7 - ನೋಟೀಸು
ನಿಪಿ-7(ಎ) - ಸಹಿ.
ನಿಪಿ-8 ರಿಂದ 10 - ಗಾಯದ ಪ್ರಮಾಣ ಪತ್ರಗಳು
ನಿಪಿ-8(ಎ), 9(ಎ) ಮತ್ತು 10(ಎ)- ಸಹಿಗಳು.

3. ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ವಿವರ:

- ಇಲ್ಲಾ -

4. ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ :

- ಇಲ್ಲಾ -

NALINA S C Digitally signed by NALINA S C Date: 2026.08.04 12:30:45 +0530

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕಡೂರು.